**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ. ನಂ.462/2025**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೊಲೀಸ ಠಾಣೆ.

**ವಿರುದ್ಧ** –

ಆರೋಪಿತರಾದ 1. ಶಿವಪ್ಪ ತಂದೆ ರಂಗಪ್ಪ ಮಕಾಶಿ,
ವಯಸ್ಸು: 32 ವರ್ಷಗಳು, ಉಃ ಒಕ್ಕಲುತನ,

2. ದೇವಿಕೆಮ್ಮ ಗಂಡ ಹಂಪಯ್ಯ, ವಯಸ್ಸು: 52 ವರ್ಷ,
ಉಃ ಮನೆಕೆಲಸ,

3. ಬಾಲಮ್ಮ ಗಂಡ ಯಂಕಪ್ಪ, ವಯಸ್ಸುಃ 35 ವರ್ಷ,
ಉಃ ಮನೆಕೆಲಸ,

4. ಹಂಪಯ್ಯ ತಂದೆ ಬಾಲಯ್ಯ, ವಯಸ್ಸುಃ 60 ವರ್ಷ,
ಉಃ ಒಕ್ಕಲುತನ, ಎಲ್ಲರೂ ಸಾಃ ಬಿ.ಗಣೇಕಲ್,
ತಾಃ ಅರಕೇರಾ.

**ದೋಷರೋಪಣೆ**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು, ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮಗಳ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ–

ದಿನಾಂಕ 15.06.2025 ರಂದು ಬೆಳಿಗ್ಗೆ 10.30 ಗಂಟೆ ಸುಮಾರಿಗೆ ಜಾಲಹಳ್ಳಿ ಪೊಲೀಸ್ ಠಾಣಾ ಸರಹದ್ದು, ದೇವದುರ್ಗ ತಾಲ್ಲೂಕು, ಬಿ.ಗಣೇಕಲ್ ಗ್ರಾಮದಲ್ಲಿ ಸಾಕ್ಷಿ–1 ಮತ್ತು 4 ರವರು ತಮ್ಮ ಮನೆಯ ಮುಂದೆ ಕುಳಿತುಕೊಂಡಿದ್ದಾಗ 1 ನೇ ಆರೋಪಿತರಾದ ನೀವು ಸಾಕ್ಷಿ–1 ರವರಿಗೆ ಕೈಯಿಂದ ಡುಬ್ಬಕ್ಕೆ ಜೋರಾಗಿ ಗುದ್ದಿದ್ದು, 3 ಮತ್ತು 4 ನೇ ಆರೋಪಿತರಾದ ನಿವುಗಳು ಸಾಕ್ಷಿ–4 ರವರಿಗೆ ಕೂದಲು ಹಿಡಿದು ಎಳೆದಾಡಿ ನೆಲಕ್ಕೆ ಕೆಡವಿ ಕೈಯಿಂದ ಹೊಟ್ಟೆಗೆ ಹೊಡೆದು ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.115(2) ಸಹ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 2 ನೇ ಆರೋಪಿತರಾದ ನೀವು ಸಾಕ್ಷಿ–4 ರವರಿಗೆ ಬಡಿಗೆಯಿಂದ ಎಡಪಕ್ಕೆಗೆ ಜೋರಾಗಿ ಹೊಡೆದು ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.118(1) ಸಹ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ನೇ ಆರೋಪಿತರಾದ ನೀವುಗಳು ಸಾಕ್ಷಿ–1 ರವರ ಮನೆಯ ಮುಂದೆ ಬಂದು ವಿನಾಃಕಾರಣವಾಗಿ ಲೇ ಸೂಳೆ ನಿನ್ನದು ಮತ್ತು ನಿನ್ನ ಮಗಳದು ಬಹಳ ಆಗಿದೆ ಅಂತ ಅವಾಚ್ಯವಾಗಿ ಬೈದು ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.352 ಸಹ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ನೇ ಆರೋಪಿತರಾದ ನೀವುಗಳು ಸಾಕ್ಷಿ–1 ಮತ್ತು 4 ರವರಿಗೆ ಲೇ ಸೂಳೆರೇ ಜಗಳ ಬಿಡಿಸಿದ್ದರಿಂದ ಇಬ್ಬರನ್ನು ಬಿಟ್ಟಿದ್ದೇವೆ ಇಲ್ಲದಿದ್ದರೆ ನಿಮ್ಮನ್ನು ಸಾಯಿಸಿ ಬಿಡುತ್ತಿದ್ದೇವು ಅಂತಾ ಜೀವದ ಬೇದರಿಕೆ ಹಾಕಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.351(2) ಸಹ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 26.05.2026 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ. ನಂ.462/2025**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೊಲೀಸ ಠಾಣೆ.

**ವಿರುದ್ಧ** –

ಆರೋಪಿತರಾದ 1. ಶಿವಪ್ಪ ತಂದೆ ರಂಗಪ್ಪ ಮಕಾಶಿ,
2. ದೇವಿಕೆಮ್ಮ ಗಂಡ ಹಂಪಯ್ಯ,
3. ಬಾಲಮ್ಮ ಗಂಡ ಯಂಕಪ್ಪ,
4. ಹಂಪಯ್ಯ ತಂದೆ ಬಾಲಯ್ಯ,

:: **ಆಪಾದನೆ** ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ–

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ–

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.